ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಸೋಮವಾರಪೇಟೆ
ಸಿ.ಸಿ. ನಂ309/2025

| | | |
|---|---|---|
| ಹೆಸರು | : ಆರ್ಯ ರಾಮಸ್ವಾಮಿ | ಪಿಡಬ್ಲ್ಯೂ-1 |
| ತಂದೆಯ ಹೆಸರು | : ಅಂಕಯ್ಯ | ಸಿಡಬ್ಲ್ಯೂ-1 |
| ವಯಸ್ಸು | : 59 ವರ್ಷ | |
| ವೃತ್ತಿ | : ಅಬಕಾರಿ ನಿರೀಕ್ಷಕರು | |
| ವಾಸ ಸ್ಥಳ | : ಸೋಮವಾರಪೇಟೆ | |

ದಿಃ20.02.2026 ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸ. ಸ. ಅಭಿಯೋಜಕರಿಂದ:

ದಿಃ30.09.2024 ರಿಂದ ಇಲ್ಲಿಯವರೆಗೆ ಸೋಮವಾರಪೇಟೆ ವಲಯ ಅಬಕಾರಿ ಕಚೇರಿಯಲ್ಲಿ ಅಬಕಾರಿ ನಿರೀಕ್ಷಕ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. .

ದಿಃ31.01.2025 ರಂದು ಸಾಯಂಕಾಲ ಸೋಮವಾರ ಪೇಟೆ ತಾಲ್ಲೂಕಿನ ಅವರೇದಾಳು ಗ್ರಾಮದಲ್ಲಿ ನಾನು ಮತ್ತು ಚಾಸಾ 2 ಮತ್ತು 3 ರವರೊಂದಿಗೆ ಗಸ್ತು ಕರ್ತವ್ಯದಲ್ಲಿರುವಾಗ ಸಮಯ 6.50 ಗಂಟೆಗೆ ಇಲಾಖೆ ಜೀಪ್ ಹತ್ತಿರ ಒಬ್ಬ ವ್ಯಕ್ತಿಬಂದು ಚಾಸಾ 2 ರವರ ಹತ್ತಿರ ಅವರೇದಾಳು ಗ್ರಾಮದಲ್ಲಿ ವೇದಮೂರ್ತಿ ಎಂಬುವವರು ಅವರ ಮನೆ ಮತ್ತು ಅಂಗಡಿಯಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆಂದು ಮಾಹಿತಿ ನೀಡಿರುತ್ತಾರೆ. ಈ ವಿಷಯವನ್ನು ಚಾಸಾ 2 ರವರು ನನಗೆ ಲಿಖಿತ ದೂರನ್ನು ನೀಡಿರುತ್ತಾರೆ. ನಾನು ತಕ್ಷಣ ಕ್ರಮ ಕೈಗೊಂಡು ಆರೋಪಿಯ ಮನೆಗೆ ಇಲಾಖಾ ಜೀಪಿನಲ್ಲಿ ಹೋಗಿರುತ್ತೇವೆ. ಮನೆಯ ಹತ್ತಿರ ಒಬ್ಬ ವ್ಯಕ್ತಿಯು ಹಾದು ಹೋಗುತ್ತಿದ್ದು ಅವನನ್ನು ಕರೆದು ವಿಷಯ ತಿಳಿಸಿ ಪಂಚರಾಗಿ ಬರಲು ಕೇಳಿಕೊಂಡಾಗ ನಿರಾಕರಿಸಿರುತ್ತಾರೆ. ನಂತರ ಆರೋಪಿಯು ತಪ್ಪಿಸಿಕೊಳ್ಳುವ ಕಾರಣ ಸ್ಥಳದಲ್ಲೇ ಶೋಧನಾ ವಾರೆಂಟನ್ನು ತಯಾರಿಸಿ ಇಲಾಖೆ ಸಿಬ್ಬಂದಿಗಳನ್ನು ಪಂಚರಾಗಿ ಮಾಡಿಕೊಂಡು ಆರೋಪಿಯ ಮನೆಯ ಬಳಿ ತೆರಳಿರುತ್ತೇವೆ. ಮನೆಯಲ್ಲಿ ಒಬ್ಬ ವ್ಯಕ್ತಿ ಇದ್ದು ನೀವು ಯಾರೆಂದು ಕೇಳಿದಾಗ ನನ್ನ ಹೆಸರು ವೇದಮೂರ್ತಿ ಎಂದು ಹೇಳಿರುತ್ತಾರೆ. ಕೂಡಲೇ ಪರಸ್ಪರ ಅಂಗಶೋಧನೆ ಮಾಡಿಕೊಂಡು ಅವರಿಗೆ ನಾವುಬಂದ ವಿಚಾರವನ್ನು ತಿಳಿಸಿ ಮನೆ ಮತ್ತು ಅಂಗಡಿಯನ್ನು ಶೋಧನೆ ಮಾಡಬೇಕೆಂದು ತಿಳಿಸಿರುತ್ತೇವೆ. ಅದಕ್ಕೆ ಅವರು ಸಹಕರಿಸಿರುತ್ತಾರೆ. ಮನೆಯನ್ನು ಶೋಧನೆ ಮಾಡಲಾಗಿ ಅಲ್ಲಿ ಯಾವುದೇ ಅಬಕಾರಿ ಅಕ್ರಮ ವಸ್ತುಗಳು ಕಂಡುಬಂದಿರುವುದಿಲ್ಲ ನಂತರ

ಅವರನ್ನು ನಿಮ್ಮ ಅಂಗಡಿ ಎಲ್ಲಿದೆ ಎಂದು ಕೇಳಲಾಗಿ ಅಲ್ಲೇ ಪಕ್ಕದಲ್ಲಿದ್ದ ಅಂಗಡಿಗೆ ಕರೆದುಕೊಂಡು ಹೋಗಿರುತ್ತಾರೆ. ಅಂಗಡಿಯನ್ನು ಪರಿಶೀಲಿಸಲಾಗಿ ಒಂದು ಟೇಬಲ್ ಕೆಳಗೆ ಒಂದು ಚೀಲವಿದ್ದು ಅದನ್ನು ಪರಿಶೀಲಸಿಸಲಾಗಿ ಅದರಲ್ಲಿ 90 ಮಿಲಿ ಯ 40 ಒರಿಜಿನಲ್ ಚಾಯ್ಸ್ ವಿಸ್ಕಿ 180 ಮಿಲಿಯ ಒಂದು ಬಿಜಾಯ್ಸ್ ಬ್ರಾಂದಿ, 180 ಮಿಲಿಯ 4 ಬ್ಯಾಗ್ ಪೈಪರ್ ರಮ್ ಇರುವುದಾಗಿ ಕಂಡುಬಂದಿರುತ್ತದೆ. ಇದನ್ನು ಮಾರಾಟ ಮಾಡಲು ರಹದಾರಿ ಇದೆಯಾ ಎಂದು ಕೇಳಲಾಗಿ ಯಾವುದೇ ರಹದಾರಿ ಇರುವುದಿಲ್ಲ ಎಂದು ನುಡಿದಿರುತ್ತಾರೆ. ಆದ ಕಾರಣ ಎಲ್ಲಾ ಮಾಲನ್ನು ಇಲಾಖಾ ವಶಕ್ಕ ತೆಗೆದುಕೊಂಡು ಅದರಲ್ಲಿ 90 ಮಿ ಲಿ ಯ 20 ಒರಿಜಿನಲ್ ಚಾಯ್ಸ್ ವಿಸ್ಕಿ, 180 ಮಿಲಿಯ ಬ್ಯಾಗ್ ಪೈಪರ್ ರಮ್ ನ 2 ಪ್ಯಾಕೆಟ್ಗಳನ್ನು, 180 ಮಿಲಿಯ ಬಿಜಾಯ್ಸ್ ನ 1 ಪ್ಯಾಕೆಟ್ ನ್ನು ರಾಸಾಯನಿಕ ಪರೀಕ್ಷೆಗೆ ತೆಗೆದುಕೊಂಡು ಸ್ಥಳದಲ್ಲಿಯೇ ಬಿಳಿ ಬಟ್ಟೆಯಿಂದ ಕಟ್ಟಿ ದಾರದಿಂದ ಬಿಗಿದು ಇಲಾಖಾ ಸೀಲ್ ಮಾಡಲಾಯಿುತು. ಬಾಕಿ ಉಳಿದ ಮದ್ಯವನ್ನು ಇಲಾಖಾ ವಶಕ್ಕ ಪಡೆಯಲಾಯಿತು. ನಂತರ ಆರೋಪಿಗೆ ವಯಸ್ಸಾದ ಕಾರಣ ನೋಟೀಸನ್ನು ನೀಡಿ ಅವರನ್ನು ಬಿಡುಗಡೆ ಮಾಡಲಾಯಿುತು. ಈ ಮಹಜರನ್ನು ಸಂಜೆ 7.00-8.20 ರವರೆಗೆ ಇಡೀ ಮಹಜರ್ ಪ್ರಕ್ರಿಯೆಯನ್ನು ವೀಡಿಯೋ ಮಾಡಿರುತ್ತೇವೆ. ನಂತರ ಮುದ್ದೆ ಮಾಲಿನೊಂದಿಗೆ ಕಚೇರಿಗೆ ತೆರಳಿ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕ ಸಲ್ಲಿಸಿರುತ್ತೇವೆ. ನಂತರ ದಿಃ14.02.2025 ರಂದು ಈ ಪ್ರಕರಣದಲ್ಲಿ ಮಾದರಿಯಾಗಿ ತೆಗೆದ ಟೆಟ್ರಾ ಪ್ಯಾಕೆಟ್ ಗಳನ್ನು ರಾಸಾಯನಿಕ ಮಾದರಿಗಾಗಿ ಚಾಸಾ3 ರವರ ಮುಖಾಂತರ ಬೆಂಗಳೂರು ಎಫ್ ಎಸ್ ಎಲ್ ಗೆ ಕಳಹಿಸಿರುತ್ತೇವೆ. ಆ ನಂತರ ಈ ಪ್ರಕರಣವನ್ನು ಮುಂದಿನ ತನಿಖೆಗಾಗಿ ಚಾಸಾ 6 ರವರಿಗೆ ಹಸ್ತಾಂತರಿಸಲಾಯಿತು.

ದೂರನ್ನು ನಿಪಿ 1, ಸಾಕ್ಷಿಯ ಸಹಿಯನ್ನು ನಿಪಿ 1(ಎ)ಎಂದು , ಪ್ರಥವು ವರ್ತಮಾನ ವರದಿಯನ್ನು ನಿಪಿ 2, ಸಾಕ್ಷಿಯ ಸಹಿಯನ್ನು ನಿಪಿ 2(ಎ)ಎಂದು , ಶೋಧನಾ ಸಮಚ್ಚಿತ ಆಧಾರವನ್ನು ನಿಪಿ 3, ಸಾಕ್ಷಿಯ ಸಹಿಯನ್ನು ನಿಪಿ 3(ಎ)ಎಂದು ,ಮಹಜರನ್ನು ನಿಪಿ 4, ಸಾಕ್ಷಿಯ ಸಹಿಯನ್ನು ನಿಪಿ 4(ಎ)ಎಂದು , ಮಾದರಿ ಮೊಹರನ್ನು ನಿಪಿ 5, ಸಾಕ್ಷಿಯ ಸಹಿಯನ್ನು ನಿಪಿ 5(ಎ)ಎಂದು , ರಸಾಯನಿಕ ಪ್ರಯೋಗಾಲಯಕ್ಕ ಕಳುಹಿಸಿದ ಮನವಿಯನ್ನು ನಿಪಿ 6, ಸಾಕ್ಷಿಯ ಸಹಿಯನ್ನು ನಿಪಿ 6(ಎ)ಎಂದು ,ಮಹಜರ್ ಸಮಯದಲ್ಲಿ ತೆಗೆದ ಫೋಟೋಗಳನ್ನು ನಿಪಿ 7 ಮತ್ತು 8 ಎಂದು, ಸಿಡಿ ನಿಪಿ 9 ಎಂದು ಗುರುತಿಸಲಾಯಿುತು. ಮಾದರಿಗೆ ತೆಗೆದಂತಹ ಟೆಟ್ರಾ ಪ್ಯಾಕೆಟ್ ಗಳನ್ನು ನೋಡಿ ಗುರುತಿಸುತ್ತೇನೆ. 20 ಒರಿಜಿನಲ್ ಚಾಯ್ಸ್ ಟೆಟ್ರಾ ಪ್ಯಾಕೆಟ್ ಗಳನ್ನು ಎಂ ಒ 1 ಎಂದು, ಮಾದರಿಗಾಗಿ ತೆಗೆದ 180 ಮಿಲಿಯ ಬಿಜಾಯ್ಸ್ ನ ಬ್ರಾಂದಿ ಟೆಟ್ರಾ ಪ್ಯಾಕೆಟ್ ಗಳನ್ನು ಎಂ ಒ 2 ಎಂದು, 180 ಮಿಲಿಯ 2 ಬ್ಯಾಗ್ ಪೈಪರ್

ರಮ್ ನ ಟೆಟ್ರಾ ಪ್ಯಾಕೆಟ್ ಗಳನ್ನ ಎಂ ಒ 3 ಎಂದು ಗುರುತಿಸಲಾಯಿುತು. ಆರೋಪಿಯನ್ನು ನೋಡಿದರೆ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ವಕೀಲರು ಗೈರು ಹಾಜರಾದ ಕಾರಣ ಕಾಲಾವಕಾಶ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸರಿ ಇದೆ.

ಸಹಿ/-

ಸಿ.ಜೆ.ಮತ್ತು ಪ್ರ.ದ.ನ್ಯಾ .ದಂ

ಸೋಮವಾರಪೇಟೆ